ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂರು ವರ್ಷದ ರಾಜ್ಯ ಹೆದ್ದಾರಿಯ ನಿರ್ವಹಣೆಯ ಯೋಜನೆಯ ಅಡಿಯಲ್ಲಿ ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ ಚಿಂತಾಮಣಿ ತಾಲ್ಲೂಕಿನಲ್ಲಿ ತೆಗೆದುಕೊಂಡ ರಾಜ್ಯ ಹೆದ್ದಾರಿ ನಿರ್ವಹಣೆಯ ಉದ್ದವು 22 20 ಕಿ ಮೀ ಇರುತ್ತದೆ ಚಿಂತಾಮಣಿ ಪಟ್ಟಣ ವ್ಯಾಪ್ತಿಯಲ್ಲಿನ 1 40 ಕಿ ಮೀ ರಸ್ತೆಯ ನಿರ್ವಹಣೆ ತೆಗೆದುಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ ಅಲ್ಲದೆ, ಸದರಿ ರಾಜ್ಯ ಹೆದ್ದಾರಿಯ ಮೂಡಿಗೆರೆ–ವೆಂಕಟಗಿರಿಕೋಟೆ (ರಾಜ್ಯ ಹೆದ್ದಾರಿ–58) ವಾಯಾ ಶಿರಾ–ಚಿತ್ತೂರು ರಸ್ತೆಯ ಕಿ ಮೀ 294 00 ಯಿಂದ 341 00 ರವರೆಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದ ಆರ್ಥಿಕ ಪ್ರಾಮುಖ್ಯತೆ ಯೋಜನೆ ಅಡಿಯಲ್ಲಿ ಮಂಜೂರಾಗಿದ್ದು, ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿರುತ್ತವೆ

ಇ) ರಾಜ್ಯ ಹೆದ್ದಾರಿ ನಿರ್ವಹಣೆಯ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳನ್ನು ಒಂದು ತಿಂಗಳೊಳಗಾಗಿ ಪೂರ್ಣಗೊಳಿಸಲಾಗುವುದು ಹಾಗೂ ಕೇಂದ್ರ ಭೂಸಾರಿಗೆ ಮಂತ್ರಾಲಯದ ಅಡಿಯಲ್ಲಿ ತೆಗೆದುಕೊಳ್ಳುವ ಕಾಮಗಾರಿಯ ಗುತ್ತಿಗೆ ಕರಾರಿನಂತೆ 5–10–2007 ರಲ್ಲಿ ಪೂರ್ಣಗೊಳಿಸಲಾಗುವುದು

1546 (2083) ಶ್ರೀ ಸುನೀಲ್ ಕುಮಾರ್ (ಕಾರ್ಕಳ) – ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತ್ಯಾಜ್ಯ (ಕಸ) ವಸ್ತುಗಳಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳನ್ನು ಸರ್ಕಾರ ಕೈಗೆತ್ತಿಕೊಂಡಿದೆಯೇ,

ಆ) ಈ ಯೋಜನೆಯನ್ನು ಯಾವ ಯಾವ ನಗರಪಾಲಿಕೆ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಹಾಗು ಈ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಂಡಿರುವ ಕಂಪನಿ ಯಾವುದು,

ಇ) ಯೋಜನೆಯ ಅಂದಾಜು ವೆಚ್ಚವೆಷ್ಟು, ಕಂಪನಿಗೆ ನೀಡಿರುವ ಗುತ್ತಿಗೆ ಅವಧಿ ಎಷ್ಟು ಹಾಗೂ ಪಾಲಿಕೆಯು ಪ್ರತಿದಿನ ನೀಡಲಿರುವ ಕಸದ (ತ್ಯಾಜ್ಯದ) ಪ್ರಮಾಣ ಎಷ್ಟು? (ವಿವರ ನೀಡುವುದು),

ಈ) ಯೋಜನೆಯ ಅನುಷ್ಠಾನಕ್ಕಾಗಿ ಯಾವ ಸ್ಥಳ ಗುರುತಿಸಲಾಗಿದೆ,

ಉ) ಹಾಗಿದ್ದಲ್ಲಿ, ರಾಜ್ಯದಲ್ಲಿ ಬೇರೆ ಕಡೆ ಈ ರೀತಿಯ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗುವುದೆ,

ಊ) ಈ ಕಸ (ತ್ಯಾಜ್ಯ) ಕ್ಕೆ ಪ್ರತಿ ಟನ್ ಗೆ ನೀಡುವ ದರ ಎಷ್ಟು,

ಋ) ಇದರಿಂದಾಗಿ ವಿದ್ಯುತ್ ಉತ್ಪಾದನಾ ಪ್ರಮಾಣ ಎಷ್ಟು,

ಎ) ಇದರ ವಿದ್ಯುತ್ ಮಾರಾಟ ದರ ಎಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಈ ಯೋಜನೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ಸ್ ಕಂಪನಿಯೊಂದಿಗೆ ಬೂಟ್ (ಬಿಲ್ಡ್, ಓನ್, ಒಪರೇಟ್, ಟ್ರಾನ್ಸ್‌ಫರ್) ಆಧಾರದ ಮೇಲೆ ಅನುಷ್ಠಾನಗೊಳಿಸಲು ಒಪ್ಪಂದ ಮಾಡಿಕೊಂಡಿದೆ ಮೆ॥ ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ಕಂಪನಿ ಈ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಂಡಿದೆ

ಇ) ಈ ಯೋಜನೆಯ ಅಂದಾಜು ವೆಚ್ಚ ರೂ 4845 ಲಕ್ಷಗಳಾಗಿರುತ್ತದೆ ಕಂಪನಿಯು ಈ ಯೋಜನೆಯನ್ನು ಬೂಟ್ ಆಧಾರದ ಮೇಲೆ ಅನುಷ್ಠಾನಗೊಳಿಸುತ್ತಿದೆ ಬೆಂಗಳೂರು ಮಹಾನಗರ ಪಾಲಿಕೆಯು ಈ ಯೋಜನೆಗೆ ನೀಡಲಿರುವ ಕಸದ (ತ್ಯಾಜ್ಯದ) ಪ್ರಮಾಣ 1000 ಟಿಪಿಡಿ(ಟನ್ಸ್ ಪರ್ ಡೆ) ಎಂದು ಅಂದಾಜಿಸಲಾಗಿದೆ

ಈ) ಈ ಯೋಜನೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನ ಮಂಡೂರು ಗ್ರಾಮದಲ್ಲಿ ಜಾರಿಗೊಳಿಸಲು ಗುರುತಿಸಲಾಗಿದೆ

ಉ) ರಾಜ್ಯದಲ್ಲಿ ಬೇರೆ ಕಡೆ ಈ ರೀತಿಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅಲ್ಲಿ ಲಭ್ಯವಿರುವ ಕಸವನ್ನು ಆಧರಿಸಿ ಸೂಕ್ತ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲು ಖಾಸಗಿ ಕಂಪನಿಗಳು ಬೂಟ್ ಆಧಾರದ ಮೇಲೆ ಮುಂದೆ ಬಂದಲ್ಲಿ ಸರ್ಕಾರ ಮಟ್ಟದಲ್ಲಿ ಪರಿಶೀಲಿಸಲಾಗುವುದು

ಊ) ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿ ಟನ್ ಕಸ (ತ್ಯಾಜ್ಯ) ಮೆ॥ ಶ್ರೀನಿವಾಸ ಗಾಯತ್ರಿ ರಿಸೋರ್ಸ್ ರಿಕವರಿ ಲಿಮಿಟೆಡ್ ಕಂಪನಿಗೆ ನೀಡುವುದಕ್ಕೆ ರೂ 1 ಕ್ಕೆ ಒಪ್ಪಂದ ಮಾಡಿಕೊಂಡಿದೆ

ಋ) ಈ ಯೋಜನೆಯ ಉತ್ಪಾದನಾ ಪ್ರಮಾಣ 8 ಮೆ ವ್ಯಾ ಆಗಿರುತ್ತದೆ

ಎ) ವಿದ್ಯುತ್ ಉತ್ಪಾದಕರೊಂದಿಗೆ 10 ವರ್ಷಗಳ ಅವಧಿಗೆ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಂಡ ನಂತರ ಕಂಪನಿಯು ಯೋಜನೆಯನ್ನು ಕಮಿಷನ್ ಮಾಡಿದ ನಂತರದಿಂದ ಪ್ರತಿ ಯೂನಿಟ್‌ಗೆ ರೂ 2 85 ರಂತೆ ಹಾಗೂ ಪ್ರತಿ ವರ್ಷಕ್ಕೆ ಶೇಕಡ 2 ರಷ್ಟು ಎಸ್ಕಲೇಷನ್ ದರವನ್ನು ಖರೀದಿ ಒಡಂಬಡಿಕೆಯ ಅವಧಿಯವರೆಗೆ ನಿಗದಿಪಡಿಸಲು ಅವಕಾಶವಿದೆ

1547 (2084) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಅವ್ಯಾಹತವಾಗಿ (ಅನಧಿಕೃತವಾಗಿ) ಅಕ್ರಮವಾಗಿ ಲೈವ್‌ಬ್ಯಾಂಡ್‌ಗಳು ತಮ್ಮ ಚಟುವಟಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ಈ ದಂದೆ ನಡೆಯುತ್ತಿದೆ,

ಇ) ಈ ಲೈವ್‌ಬ್ಯಾಂಡ್‌ಗಳನ್ನು ನಡೆಸಲು ಹೋಟೆಲ್, ಕ್ಲಬ್‌ಗಳ ಬದಲಿಗೆ ಕಲ್ಯಾಣ ಮಂಟಪಗಳನ್ನು ಬಳಕೆ ಮಾಡಿಕೊಳ್ಳುತ್ತಿರುವುದು ನಿಜವೇ,

ಈ) ಹಾಗಿದ್ದಲ್ಲಿ, ಇದರ ತಡೆಗೆ ರಾಜ್ಯ ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಉ) ಇದುವರೆಗೆ ಎಷ್ಟು ಕಲ್ಯಾಣ ಮಂಟಪದಲ್ಲಿ ಪ್ರದರ್ಶನ ನಡೆಸುವವರನ್ನು ಪತ್ತೆ ಹಚ್ಚಲಾಗಿದೆ ಇಂತಹವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?